ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 79-89
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಬ್ರಿಟಿಷ್ ಆಳ್ವಿಕೆ ಕಾಲದ ಚಿತ್ರದುರ್ಗ: ಆಡಳಿತಾತ್ಮಕ ಸ್ಥಿತ್ಯಂತರಗಳ ಅಸ್ಮಿತೆ

**ಡಾ.ರೇವಣಸಿದ್ದಪ್ಪ ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

***Abstract:***
*ಚಿತ್ರದುರ್ಗವು ಕರ್ನಾಟಕದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿರುವ ಪ್ರದೇಶವಾಗಿದ್ದು, ವಿವಿಧ ರಾಜವಂಶಗಳ ಆಡಳಿತದ ಅನುಭವದ ನಂತರ ಬ್ರಿಟಿಷ್ ಆಳ್ವಿಕೆಯ ಅಧೀನಕ್ಕೆ ಒಳಪಟ್ಟಿತು. ಬ್ರಿಟಿಷರ ಆಡಳಿತ ಅವಧಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳು ಸಂಭವಿಸಿದವು. ಸಾಂಪ್ರದಾಯಿಕ ಆಡಳಿತ ವ್ಯವಸ್ಥೆಯನ್ನು ಕ್ರಮೇಣ ಆಧುನಿಕ ಆಡಳಿತದ ರೂಪುರೇಷೆಗಳಿಂದ ಬದಲಾಯಿಸುವ ಪ್ರಕ್ರಿಯೆ ನಡೆಯಿತು. ಭೂಮಾಪನ, ಭೂ ಕಂದಾಯ ವ್ಯವಸ್ಥೆ, ನ್ಯಾಯಾಂಗ ಮತ್ತು ಪೊಲೀಸ್ ವ್ಯವಸ್ಥೆಗಳ ಪುನರ್‌ಸಂಘಟನೆ, ಸ್ಥಳೀಯ ಆಡಳಿತ ಸಂಸ್ಥೆಗಳ ಸ್ಥಾಪನೆ ಹಾಗೂ ಸಾರ್ವಜನಿಕ ಸೇವೆಗಳ ವಿಸ್ತರಣೆಯ ಮೂಲಕ ಬ್ರಿಟಿಷರು ತಮ್ಮ ಆಡಳಿತದ ಹಿಡಿತವನ್ನು ಬಲಪಡಿಸಿದರು. ಈ ಬದಲಾವಣೆಗಳು ಕೇವಲ ಆಡಳಿತಾತ್ಮಕ ಸ್ವರೂಪದಲ್ಲಷ್ಟೇ ಅಲ್ಲದೆ, ಸ್ಥಳೀಯ ಸಮಾಜದ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಮೇಲೂ ಪರಿಣಾಮ ಬೀರಿದವು. ಈ ಅಧ್ಯಯನವು ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಚಿತ್ರದುರ್ಗದಲ್ಲಿ ಉಂಟಾದ ಆಡಳಿತಾತ್ಮಕ ಸ್ಥಿತ್ಯಂತರಗಳನ್ನು ವಿಶ್ಲೇಷಿಸುವುದರ ಜೊತೆಗೆ, ಅವುಗಳ ಪರಿಣಾಮವಾಗಿ ರೂಪುಗೊಂಡ ಪ್ರಾದೇಶಿಕ ಅಸ್ಮಿತೆ ಮತ್ತು ಸಾಮಾಜಿಕ ಪರಿವರ್ತನೆಗಳನ್ನು ಪರಿಶೀಲಿಸುತ್ತದೆ. ಐತಿಹಾಸಿಕ ದಾಖಲೆಗಳು, ಸರ್ಕಾರದ ವರದಿಗಳು ಮತ್ತು ದ್ವಿತೀಯಕ ಮೂಲಗಳ ಆಧಾರದ ಮೇಲೆ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.*

***Keywords:*** *ಚಿತ್ರದುರ್ಗ, ಬ್ರಿಟಿಷ್ ಆಳ್ವಿಕೆ, ಆಡಳಿತಾತ್ಮಕ ಸ್ಥಿತ್ಯಂತರಗಳು, ಪ್ರಾದೇಶಿಕ ಅಸ್ಮಿತೆ, ವಸಾಹತುಶಾಹಿ ಆಡಳಿತ*

**ಪೀಠಿಕೆ**

ಚರಿತ್ರೆಯನ್ನು ಕಾರಣ ಮತ್ತು ಪರಿಣಾಮ ದೃಷ್ಟಿಯಿಂದಷ್ಟೇ ನೋಡದೆ, ಕಾಲದ ದೃಷ್ಟಿಯಿಂದ ನೋಡುವುದೂ ಚರಿತ್ರೆಕಾರನ ಕರ್ತವ್ಯವಾಗಿದೆ. ಯಾವುದೇ ಚರಿತ್ರೆಕಾರ ತನ್ನ ಬರಹ ಹಾಗೂ ವರ್ತಮಾನಕ್ಕೆ ಸಾಕ್ಷಿಯಾಗಿರುತ್ತಾನೆ. ಅವನು ಬಿತ್ತರಿಸುವ ಭೂತಕಾಲವನ್ನಾಗಲಿ; ಒತ್ತಾಯಿಸುವ ಭವಿಷ್ಯತ್ತನ್ನಾಗಲಿ ವರ್ತಮಾನದಲ್ಲಿ ಕೂತು ಮಾತನಾಡಿಸುತ್ತಾನೆ. ಈ ಮಾತನ್ನು ಇಲ್ಲಿ ಪ್ರಸ್ತಾಪಿಸಿದ್ದರ ಸಂದರ್ಭ ಇಷ್ಟೇ, ಹೈದರ್ ಮತ್ತು ಟಿಪ್ಪು, ಬ್ರಿಟಿಷರು ತಮ್ಮ ನೆಲಕ್ಕೆ ಕಾಲಿಡದಂತೆ ತಡೆಯಲು ನಡೆಸಿದ್ದ ಪ್ರಯತ್ನಕ್ಕೆ ಸವಾಲಾಗಿ, ಟಿಪ್ಪು ನಂತರವೂ ಎದುರಾದ ಹಲವು ಸವಾಲುಗಳನ್ನು ಎದುರಿಸಿ, ಅಂದಿನ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷ್ ವಸಾಹತುಶಾಹಿ ಪ್ರಭುತ್ವದ ಪ್ರವೇಶವಾಗಿತ್ತು.[1]

ಹದಿನೆಂಟನೆಯ ಶತಮಾನದ ದ್ವಿತೀಯಾರ್ಧದ ಆರಂಭದಲ್ಲಿ ರಾಜಾ ವೀರಮದಕರಿ ನಾಯಕ

***Please cite this article as:*** ರೇವಣಸಿದ್ದಪ್ಪ, ಎಸ್. (2026). ಬ್ರಿಟಿಷ್ ಆಳ್ವಿಕೆ ಕಾಲದ ಚಿತ್ರದುರ್ಗ: ಆಡಳಿತಾತ್ಮಕ ಸ್ಥಿತ್ಯಂತರಗಳ ಅಸ್ಮಿತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(2), 79–89

ಚಿತ್ರದುರ್ಗ ಸಂಸ್ಥಾನದ ಅರಸನಾಗಿ ಆಡಳಿತ ವಹಿಸಿಕೊಂಡಿದ್ದನು. ಅದು ಹೈದರ್ ಅಲಿ ಮೈಸೂರು ಸಂಸ್ಥಾನದ ಆಡಳಿತವನ್ನು ಪ್ರವೇಶಿಸುತ್ತಿದ್ದ ಕಾಲವಾಗಿತ್ತು. ದೊಡ್ಡ ಮದಕರಿನಾಯಕನೊಂದಿಗೆ ಒಡಗೂಡಿ ಸಂಸ್ಥಾನದ ವಿಸ್ತರಣೆಯ ಮಹಾದುದ್ದೇಶ ಹೊಂದಿದ್ದ ರಾಜಾ ವೀರಮದಕರಿ ನಾಯಕನಿಗೆ, ಮಿತ್ರನಂತಿದ್ದು ಶತ್ರುವಾಗಿ ಪರಿಣಮಿಸಿದ್ದ ಹೈದರ್ ಅಲಿ ತೊಡಕಾಗಿದ್ದ. ಕ್ರಿ.ಶ. 1749ರಲ್ಲಿ ಮೈಸೂರಿನ ಸೇನಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದ ಹೈದರ್ ಅಲಿ, ಮೈಸೂರಿನ ಸರ್ವಾಧಿಕಾರಿಯಾಗಿ ಆಡಳಿತ ನಡೆಸಿದ್ದನು. ಕ್ರಿ.ಶ. 1780ರಲ್ಲಿ ಹೈದರ್ ಅಲಿ ಮರಣ ಹೊಂದಿದ್ದನು. ಅದೂ ಚಿತ್ರದುರ್ಗ ಸಂಸ್ಥಾನವನ್ನು ನಿರ್ನಾಮ ಮಾಡಿ. ಚಿತ್ರದುರ್ಗ ಸಂಸ್ಥಾನವನ್ನು ನಿರ್ನಾಮ ಮಾಡುವುದಕ್ಕಾಗಿಯೇ ಇದ್ದಂತಿದ್ದ 'ಹೈದರ್ ಅಲಿ'ಯನ್ನು, ಚಿತ್ರದುರ್ಗ ಸಂಸ್ಥಾನವನ್ನು ಅಂತ್ಯಗೊಳಿಸಲು ಚರಿತ್ರೆ ಸೃಷ್ಟಿಸಿದ್ದ ಚರಿತ್ರೆ ಎಂದರೆ ಅತಿಶಯೋಕ್ತಿಯೇನಲ್ಲ. ಒಂದು ವೇಳೆ ಕೇವಲ ಒಂದೇ ಒಂದು ವರ್ಷ ಚಿತ್ರದುರ್ಗ ಸಂಸ್ಥಾನ ಉಳಿದುಕೊಂಡಿದ್ದಿದ್ದರೆ ಕೆಳದಿ, ಮೈಸೂರು ಸಂಸ್ಥಾನಗಳಂತೆಯೇ ಈ ಸಂಸ್ಥಾನವೂ ದೀರ್ಘಕಾಲ ಮುಂದುವರೆಯುತ್ತಿತ್ತು. ಏಕೆಂದರೆ, ಹೈದರಾಲಿ ಮರಣ ಹೊಂದಿದ ನಂತರ ಅವನ ಮಗ ಟಿಪ್ಪುಸುಲ್ತಾನ್‌ಗೆ ಮರಾಠರು ಮತ್ತು ಬ್ರಿಟಿಷರು ಕಂಟಕವಾಗಿ ಪರಿಣಮಿಸಿದ್ದರು.[2]

ಬ್ರಿಟಿಷ್ ಸೇನಾನಿ, 'ಕರ್ನಲ್ ಜೇಮ್ಸ್ ಡಾಲ್ರಿಂಪಾಲ್' ಕ್ರಿ.ಶ. 1780ರ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ, ಟಿಪ್ಪುವನ್ನು ಸೋಲಿಸಿ, ಕ್ರಿ.ಶ. 1779ರಲ್ಲಿ ಹೈದರ್‌ನ ವಶವಾಗಿದ್ದ 'ಚಿತ್ರದುರ್ಗ'ವನ್ನು ಬ್ರಿಟಿಷರ ವಶಕ್ಕೊಪ್ಪಿಸಿದ್ದನು. ಸಂಸ್ಥಾನದಲ್ಲಿ ಬ್ರಿಟಿಷ್ ಆಡಳಿತ ನೆಲೆಗೊಳ್ಳುವ ಆರಂಭದಲ್ಲಿಯೇ ಸ್ವತಂತ್ರಕ್ಕಾಗಿ ಹೋರಾಟವನ್ನು ಆರಂಭಿಸಿದ್ದ ದೋಂಡಿಯಾ ವಾಘನನ್ನು ಎದುರಿಸಿ, ಸಂಸ್ಥಾನದ ಆಡಳಿತಕ್ಕೆ ಸಹಕರಿಸಿದ್ದವನು ಬ್ರಿಟಿಷ್ ದಳಪತಿ 'ಕರ್ನಲ್ ಜೇಮ್ಸ್ ಡಾಲ್ರಿಂಪಾಲ್'.[3]

ಇತಿಹಾಸದಲ್ಲಿ, ವಸಾಹತು ಎಂದರೆ ಒಂದು ರಾಜ್ಯದ ನೆಲಸಿಗರ ನೇರ ರಾಜಕೀಯ ನಿಯಂತ್ರಣದಲ್ಲಿರುವ ಮತ್ತು ಅವರಿಂದ ಆಕ್ರಮಿತವಾದ ಪ್ರಾಂತ್ಯ. ಇದು ಸಾರ್ವಭೌಮನ ತವರು ಪ್ರಾಂತದಿಂದ ಭಿನ್ನವಾಗಿದೆ. ಪ್ರಾಚೀನ ಕಾಲದಲ್ಲಿನ ವಸಾಹತುಗಳ ವಿಷಯದಲ್ಲಿ, ನಗರ ರಾಜ್ಯಗಳು ಹಲವು ವೇಳೆ ತಮ್ಮ ಸ್ವಂತದ ವಸಾಹತುಗಳನ್ನು ಸ್ಥಾಪಿಸುತ್ತಿದ್ದವು. ಕೆಲವು ವಸಾಹತುಗಳು ಐತಿಹಾಸಿಕವಾಗಿ ದೇಶಗಳಾಗಿದ್ದರೆ, ಇತರ ವಸಾಹತುಗಳು ಅವುಗಳ ಪ್ರಾರಂಭದಿಂದ ನಿರ್ದಿಷ್ಟ ರಾಜ್ಯತ್ವವಿರದ ಪ್ರಾಂತಗಳಾಗಿದ್ದವು. ಕೈಗೊಂಬೆ ರಾಜ್ಯ ಅಥವಾ ಪರಾಧೀನ ರಾಜ್ಯದಂತಿರದೇ, ವಸಾಹತು ಯಾವುದೇ ಸ್ವತಂತ್ರ ಅಂತರಾಷ್ಟ್ರೀಯ ಪ್ರಾತಿನಿಧ್ಯವನ್ನು ಹೊಂದಿರುವುದಿಲ್ಲ, ಮತ್ತು ಅದರ ಮೇಲ್ವಿಚಾರಣ ಆಡಳಿತವು ಮಾತೃ ರಾಜ್ಯದ ನೇರ ನಿಯಂತ್ರಣದಲ್ಲಿರುತ್ತದೆ.

ಭಾರತವು ಕ್ರಿ.ಶ. 1858ರಿಂದ 1947ರವರೆಗೆ ಬ್ರಿಟಿಷ್ ಸರ್ಕಾರದ ನೇರ ನಿಯಂತ್ರಣದಲ್ಲಿದ್ದ ಸಾಮ್ರಾಜ್ಯಶಾಹಿ ರಾಜಕೀಯ ಘಟಕವಾಗಿತ್ತು. ಇದು ಇಂದಿನ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಮ್ಯಾನ್ಮಾರ್ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್‌ನ್ನು ಒಳಗೊಂಡಿತ್ತು. ಕ್ರಿ.ಶ. 15ನೇ ಶತಮಾನದಿಂದ 1961ರ ವರೆಗೆ ಪೋರ್ಚುಗೀಸ್ ಭಾರತ (ಗೋವಾ) ಪೋರ್ಚುಗಲ್‌ನ ವಸಾಹತುವಾಗಿತ್ತು.[4]

ಕರ್ನಾಟಕ ಕ್ರಿ.ಶ. 1799ರ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ನಂತರ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟಿತ್ತು. ಬ್ರಿಟಿಷರು ಮೈಸೂರು ಅರಸರೊಂದಿಗೆ ಮಾಡಿಕೊಂಡಿದ್ದ ಶ್ರೀರಂಗಪಟ್ಟಣ ಒಪ್ಪಂದದ ಮೂಲಕ ಮೈಸೂರು ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತ್ತು. ಈ ಸಂದರ್ಭದಲ್ಲಿ ಚಿತ್ರದುರ್ಗಕ್ಕೆ ಹಲವು ಬ್ರಿಟಿಷ್ ಪ್ರಜೆಗಳು ಹಾಗೂ ಅಧಿಕಾರಿಗಳು ಬಂದು ನೆಲೆಸಿದ್ದರು. ಹೈದರಾಲಿ ನಂತರ ಇಲ್ಲಿದ್ದ ಮುಸ್ಲಿಮ್ ಅಧಿಕಾರಿಗಳು ಹಾಗೂ ಪ್ರಜೆಗಳನ್ನು, ನಾಲ್ಕನೇ

ಆಂಗ್ಲೋ ಮೈಸೂರು ಯುದ್ಧದ ನಂತರ ಇಲ್ಲಿಂದ ತೆರವುಗೊಳಿಸಿದ್ದ ಬ್ರಿಟಿಷ್ ಅಧಿಕಾರಿಗಳು ಹಾಗೂ ಆ ಹೋರಾಟದಲ್ಲಿ ಭಾಗವಹಿಸಿದ್ದ ಕೆಲವು ಸೈನಿಕರು ಇಲ್ಲಿಯೇ ನೆಲೆಗೊಂಡಿದ್ದರು. ಅವರ ಕಾಲದಲ್ಲಿ ಸ್ಥಾಪನೆಗೊಂಡಿದ್ದ ಹಲವು ಸ್ಮಾರಕಗಳು ಹಾಗೂ ಅವರ ಸಮಾಧಿಗಳು ಈಗಲೂ, ಚಿತ್ರದುರ್ಗ ನಗರದ ಹೃದಯ ಭಾಗದಲ್ಲಿರುವ ಮುಖ್ಯ ಅಂಚೆ ಕಛೇರಿಯ ಎದುರು ಹಾಗೂ ನಗರದ ಅಲ್ಲಲ್ಲಿ ಕಂಡುಬರುತ್ತಿವೆ. ಇಲ್ಲಿ ನೆಲೆಸಿದ್ದ ಬ್ರಿಟಿಷರೊಂದಿಗೆ ಹಾಗೂ ಹತ್ತಿ ಗಿರಣಿಗಳೊಂದಿಗೆ ರೈತರು ನೇರ ಸಂಪರ್ಕವನಿಟ್ಟುಕೊಂಡಿದ್ದರು. ಈ ಮೂಲಕ ಚಿತ್ರದುರ್ಗ ಮತ್ತು ದಾವಣಗೆರೆಗಳಲ್ಲಿ ನಗರೀಕರಣ ಪ್ರಕ್ರಿಯೆ ಪ್ರಾರಂಭಗೊಂಡು, ಹತ್ತಿ ವ್ಯಾಪಾರ ಮತ್ತು ಹತ್ತಿಗೆ ಸಂಬಂಧಿಸಿದ ಕೈಗಾರಿಕೆಗಳ ಸ್ಥಾಪನೆಗೊಂಡಿದ್ದವು. ಅಂದರೆ, ಈ ಭಾಗದ ಬ್ರಿಟಿಷ್ ಆಳ್ವಿಕೆ ನಗರಗಳ ಬೆಳವಣಿಗೆಗೆ ಕಾರಣವಾಗಿತ್ತು. ಆದ್ದರಿಂದ ಚಿತ್ರದುರ್ಗ ಮತ್ತು ದಾವಣಗೆರೆ ನಗರಗಳು ವಸಾಹತುಶಾಹಿಕಾಲದಿಂದಲೂ ಅಸ್ತಿತ್ವದಲ್ಲಿರುವ ಕರ್ನಾಟಕದ ಪ್ರಮುಖ ನಗರಗಳೆನಿಸಿಕೊಂಡಿವೆ.[5]

**ರಾಜಕೀಯ ಬದಲಾವಣೆ ಮತ್ತು ವಶಪಡಿಸಿಕೊಳ್ಳುವಿಕೆ**

ಬ್ರಿಟಿಷರ ಆಳ್ವಿಕೆ ಕಾಲದಲ್ಲಿ (ಸು. 19ನೇ ಶತಮಾನದ ಪೂರ್ವಾರ್ಧ–ಮಧ್ಯಭಾಗ) ಚಿತ್ರದುರ್ಗ ಒಂದು "ಪ್ರಾಂತೀಯ ಆಡಳಿತ ಕೇಂದ್ರ" ಮತ್ತು ಸಶಸ್ತ್ರ ಹೋರಾಟಗಳ ರಂಗಭೂಮಿಯಾಗಿ ಹೆಸರು ಮಾಡಿದ ನಗರವಾಗಿತ್ತು. ಬ್ರಿಟಿಷ್-ಮೈಸೂರು ನಡುವಣ ರಾಜಕೀಯ, ಸ್ಥಳೀಯ ಬಂಡಾಯಗಳು, ಆರ್ಥಿಕ-ಆಡಳಿತ ಬದಲಾವಣೆಗಳು ಸಂಕೀರ್ಣವಾಗಿ ಬೆರೆತು ನಿಂತಿವೆ. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಚಿತ್ರದುರ್ಗವು ಮೈಸೂರು ಸಂಸ್ಥಾನದ ಒಂದು ಪ್ರಮುಖ ಭಾಗವಾಗಿತ್ತು. ಕ್ರಿ.ಶ. 1799ರಲ್ಲಿ ಟಿಪ್ಪು ಸುಲ್ತಾನನ ಪತನದ ನಂತರ, ಚಿತ್ರದುರ್ಗವು ಬ್ರಿಟಿಷರ ಅಧೀನದಲ್ಲಿದ್ದು, ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿತು. ಬ್ರಿಟಿಷರು ಚಿತ್ರದುರ್ಗದ ಕೋಟೆಯನ್ನು ತಮ್ಮ ವ್ಯೂಹಾತ್ಮಕ ಸ್ಥಳ ಮತ್ತು ತಮ್ಮ ಭದ್ರತೆಗಾಗಿ ಬಹಳ ಮುಖ್ಯವೆಂದು ಪರಿಗಣಿಸಿದ್ದರು. ಆರಂಭಿಕ ವರ್ಷಗಳಲ್ಲಿ ಬ್ರಿಟಿಷ್ ಸೈನ್ಯದ ತುಕಡಿಗಳು ಇಲ್ಲಿ ಬೀಡುಬಿಟ್ಟಿದ್ದವು. ಬ್ರಿಟಿಷರು ಈ ಪ್ರದೇಶವನ್ನು ತಮ್ಮ ಸಾಮ್ರಾಜ್ಯದ ರಕ್ಷಣೆ ಮತ್ತು ನಿಯಂತ್ರಣಕ್ಕಾಗಿ ಒಂದು ಪ್ರಮುಖ ಕಾರ್ಯತಂತ್ರದ ಕೇಂದ್ರವಾಗಿ ಬಳಸಿಕೊಂಡಿದ್ದರು.

ಚಿತ್ರದುರ್ಗದ ಭವ್ಯವಾದ ಏಳು ಸುತ್ತಿನ ಕೋಟೆ ಶತ್ರುಗಳಿಗೆ ಭೇದಿಸಲು ಅಸಾಧ್ಯವಾದ ರಚನೆಯಾಗಿತ್ತು. ಭೌಗೋಳಿಕವಾಗಿ ಇದು ದಕ್ಷಿಣ ಭಾರತದ ಮಧ್ಯಭಾಗದಲ್ಲಿದ್ದರಿಂದ, ಸುತ್ತಮುತ್ತಲಿನ ಪ್ರಾಂತ್ಯಗಳ ಮೇಲೆ ಕಣ್ಣಿಡಲು ಬ್ರಿಟಿಷರಿಗೆ ಇದು ಸುಲಭದ ನೆಲೆಯಾಯಿತು. 1799ರಲ್ಲಿ ಟಿಪ್ಪು ಸುಲ್ತಾನನ ಪತನದ ನಂತರ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ತನ್ನ ಸೈನಿಕ ತುಕಡಿಗಳನ್ನು (Garrison) ಚಿತ್ರದುರ್ಗ ಕೋಟೆಯಲ್ಲಿ ನಿಯೋಜಿಸಿತು. ಆರಂಭದಲ್ಲಿ ಮೈಸೂರು ಸಂಸ್ಥಾನದಲ್ಲಿ ದಂಗೆಗಳನ್ನು ಅಡಗಿಸಲು ಮತ್ತು ಶಾಂತಿ ಕಾಪಾಡಲು ಈ ಸೈನ್ಯವನ್ನು ಬಳಸಲಾಗುತ್ತಿತ್ತು. ಕೋಟೆಯ ಒಳಗಿದ್ದ ಬಲಿಷ್ಠ ಕಲ್ಲಿನ ಕೋಣೆಗಳನ್ನು ಬ್ರಿಟಿಷರು ತಮ್ಮ ಯುದ್ಧ ಸಾಮಗ್ರಿ, ಮದ್ದುಗುಂಡು (Ammunition) ಮತ್ತು ಧಾನ್ಯಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿಡಲು ಬಳಸಿಕೊಂಡರು. ಸೈನಿಕರ ವಸತಿ ಮತ್ತು ತರಬೇತಿಗಾಗಿ ಚಿತ್ರದುರ್ಗದಲ್ಲಿ ತಾತ್ಕಾಲಿಕ ಕ್ಯಾರಿಸನ್/ಕ್ಯಾಂಟೋನ್ಮೆಂಟ್ ವ್ಯವಸ್ಥೆ ಇತ್ತು. ಆದರೆ, ನಂತರದ ದಿನಗಳಲ್ಲಿ ಮಲೇರಿಯಾ ಜ್ವರದ ಹರಡುವಿಕೆ ಮತ್ತು ನೀರಿನ ಸಮಸ್ಯೆಯಿಂದಾಗಿ ಬ್ರಿಟಿಷರು ತಮ್ಮ ಮುಖ್ಯ ಸೈನಿಕ ನೆಲೆಯನ್ನು ಇಲ್ಲಿಂದ ಹರಿಹರ ಮತ್ತು ಬೆಂಗಳೂರಿಗೆ ಸ್ಥಳಾಂತರಿಸಿದರು. ಮುಖ್ಯವಾಗಿ, ಬ್ರಿಟಿಷರ ಆರಂಭಿಕ ಆಳ್ವಿಕೆಯಲ್ಲಿ ದಕ್ಷಿಣ ಭಾರತದಲ್ಲಿ ತಮ್ಮ ಹಿಡಿತವನ್ನು ಬಲಪಡಿಸಿಕೊಳ್ಳಲು

ಚಿತ್ರದುರ್ಗವು ಒಂದು ಪ್ರಮುಖ ಮಿಲಿಟರಿ ಕೋಟೆಯಾಗಿ ಕೆಲಸ ಮಾಡಿತು.[6]

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಚಿತ್ರದುರ್ಗವನ್ನು ತನ್ನ ರಾಜಕೀಯ ಹಿಡಿತಕ್ಕೆ ಪಡೆದುಕೊಂಡ ಪ್ರಕ್ರಿಯೆ ಮತ್ತು ಆ ನಂತರ ತಂದ ರಾಜಕೀಯ ಬದಲಾವಣೆಗಳು ಅತ್ಯಂತ ರೋಚಕ ಹಾಗೂ ವ್ಯವಸ್ಥಿತವಾಗಿದ್ದವು. ಇದು ಕೇವಲ ಒಂದು ಯುದ್ಧದ ಮೂಲಕ ನಡೆದದ್ದಲ್ಲ, ಬದಲಿಗೆ ಹಂತಹಂತವಾಗಿ ನಡೆದ ರಾಜಕೀಯ ಚದುರಂಗದಾಟವಾಗಿತ್ತು. ಚಿತ್ರದುರ್ಗವನ್ನು ಬ್ರಿಟಿಷರು ವಶಪಡಿಸಿಕೊಳ್ಳುವ ಮುನ್ನ, ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ನಡೆದ ರಾಜಕೀಯ ವಿದ್ಯಮಾನಗಳು ಬ್ರಿಟಿಷರ ಪ್ರವೇಶಕ್ಕೆ ಭದ್ರವಾದ ಮುನ್ನುಡಿ ಬರೆದವು. ಚಿತ್ರದುರ್ಗದ ಇತಿಹಾಸದಲ್ಲಿ ಕ್ರಿ.ಶ. 1779 ಅತ್ಯಂತ ಕರಾಳ ವರ್ಷ. ಚಿತ್ರದುರ್ಗದ ಕೊನೆಯ ಮತ್ತು ಪ್ರಖ್ಯಾತ ಪಾಳೆಯಗಾರ ಮದಕರಿ ನಾಯಕ (ಐದನೇ ಮದಕರಿ ನಾಯಕ) ಮತ್ತು ಹೈದರಾಲಿ ನಡುವೆ ಸುದೀರ್ಘ ಸಂಘರ್ಷ ನಡೆಯುತ್ತಿತ್ತು. ಹೈದರಾಲಿ ಕೋಟೆಗೆ ಮುತ್ತಿಗೆ ಹಾಕಿದಾಗ, ಒನಕೆ ಓಬವ್ವನ ಸಾಹಸ ಸೇರಿದಂತೆ ಚಿತ್ರದುರ್ಗದ ಸೈನಿಕರು ಅಪ್ರತಿಮ ವೀರಾವೇಶದಿಂದ ಹೋರಾಡಿದರು. ಆದರೆ, ಕೊನೆಗೆ ಆಂತರಿಕ ದ್ರೋಹ ಮತ್ತು ಸಂಪನ್ಮೂಲಗಳ ಕೊರತೆಯಿಂದಾಗಿ ಕೋಟೆ ಹೈದರಾಲಿಯ ವಶವಾಯಿತು. ಮದಕರಿ ನಾಯಕರನ್ನು ಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ಕರೆದೊಯ್ಯಲಾಯಿತು. ಅಲ್ಲಿಂದ ಚಿತ್ರದುರ್ಗದ ಸ್ವತಂತ್ರ ಪಾಳೆಯಗಾರರ ಆಳ್ವಿಕೆ ಅಂತ್ಯಗೊಂಡು, ಅದು ಮೈಸೂರು ಸಾಮ್ರಾಜ್ಯದ ಒಂದು ಪ್ರಮುಖ ಪ್ರಾಂತ್ಯವಾಯಿತು.[7]

ಹೈದರಾಲಿ ಮತ್ತು ಅವನ ಮಗ ಟಿಪ್ಪು ಸುಲ್ತಾನ್ ಇಬ್ಬರಿಗೂ ಚಿತ್ರದುರ್ಗದ ಭೌಗೋಳಿಕ ಮತ್ತು ವ್ಯೂಹಾತ್ಮಕ ಪ್ರಾಮುಖ್ಯತೆಯ ಅರಿವಿತ್ತು. ಹಾಗಾಗಿ ಅವರು ಕೋಟೆಯನ್ನು ಮತ್ತಷ್ಟು ಬಲಪಡಿಸಿದರು. ಫ್ರೆಂಚ್ ಇಂಜಿನಿಯರ್‌ಗಳ ನೆರವು ಪಡೆದು ಕೋಟೆಯ ಕೆಲವು ಭಾಗಗಳನ್ನು ಆಧುನಿಕ ಯುದ್ಧತಂತ್ರಕ್ಕೆ ತಕ್ಕಂತೆ ಮಾರ್ಪಡಿಸಿದ್ದರು. ಕೋಟೆಯ ಒಳಗಿದ್ದ ಹಿಂದೂ ದೇವಸ್ಥಾನಗಳಿಗೆ ಯಾವುದೇ ಧಕ್ಕೆ ತರದೇ, ತಮ್ಮ ಸೈನಿಕರ ಅನುಕೂಲಕ್ಕಾಗಿ ಕೆಲವು ಇಸ್ಲಾಮಿಕ್ ಶೈಲಿಯ ಕಟ್ಟಡಗಳು, ಮಸೀದಿ ಮತ್ತು ಕಾವಲು ಗೋಪುರಗಳನ್ನು ನಿರ್ಮಿಸಿದರು. ಬ್ರಿಟಿಷರು ಮತ್ತು ಮರಾಠರ ದಾಳಿಯನ್ನು ಎದುರಿಸಲು ಚಿತ್ರದುರ್ಗವನ್ನು ಒಂದು ಪ್ರಮುಖ ಮಿಲಿಟರಿ ಕೇಂದ್ರ ಹಾಗೂ ಮದ್ದುಗುಂಡು ಸಂಗ್ರಹಣಾ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಆದರೆ, ಮೈಸೂರು ಸುಲ್ತಾನರ ಅಧೀನದಲ್ಲಿದ್ದ ಚಿತ್ರದುರ್ಗದ ಮೇಲೆ ಬ್ರಿಟಿಷರು ಮತ್ತು ಮರಾಠರ ಕಣ್ಣಿತ್ತು. ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ದಕ್ಷಿಣಕ್ಕಿರುವ ಪ್ರಾಂತ್ಯಗಳನ್ನು ನಿಯಂತ್ರಿಸಲು ಚಿತ್ರದುರ್ಗ ಕೋಟೆ ಅತ್ಯಂತ ಸೂಕ್ತವಾಗಿತ್ತು. ಮೂರನೇ ಮೈಸೂರು ಯುದ್ಧದ ಸಮಯದಲ್ಲಿ (ಕ್ರಿ.ಶ. 1790–92), ಮರಾಠರ ಸೈನ್ಯವು ಬ್ರಿಟಿಷರೊಂದಿಗೆ ಮೈತ್ರಿ ಮಾಡಿಕೊಂಡು ಚಿತ್ರದುರ್ಗದ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ದಾಳಿ ನಡೆಸಿ ಟಿಪ್ಪುವಿಗೆ ಆರ್ಥಿಕ ಹಾಗೂ ಸೈನಿಕ ನಷ್ಟ ಉಂಟುಮಾಡಲು ಪ್ರಯತ್ನಿಸಿತ್ತು.

ಟಿಪ್ಪು ಸುಲ್ತಾನ್ ಚಿತ್ರದುರ್ಗ ಪ್ರಾಂತ್ಯದಲ್ಲಿ ಜಾರಿಗೆ ತಂದಿದ್ದ ಕಟ್ಟುನಿಟ್ಟಾದ ಆಡಳಿತ ವ್ಯವಸ್ಥೆ, ಅಂದರೆ, ತೆರಿಗೆ ವಸೂಲಿಯನ್ನು ಕ್ರಮಬದ್ಧಗೊಳಿಸಿ, ಕೃಷಿಗೆ ಪ್ರೋತ್ಸಾಹ ನೀಡಿದ್ದನು. ರೇಷ್ಮೆ ಉದ್ಯಮ ಮತ್ತು ವಾಣಿಜ್ಯ ಬೆಳೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದನು. ಸ್ಥಳೀಯ ಬೇಡ ನಾಯಕರನ್ನು (ಪಾಳೇಗಾರರ ಸೈನಿಕರು) ತನ್ನ ಸೈನ್ಯಕ್ಕೆ ಸೇರಿಸಿಕೊಂಡಿದ್ದನು. ಆದರೆ, ಒಳಗೆಲ್ಲೋ ಸ್ಥಳೀಯರಲ್ಲಿ ಮೈಸೂರು ಸುಲ್ತಾನರ ವಿರುದ್ಧ ಅಸಮಾಧಾನ ಉಂಟಾಗಿತ್ತು ಇದು ಮುಂದೆ ಬ್ರಿಟಿಷರ ಪ್ರವೇಶಕ್ಕೆ ಅನುಕೂಲವಾಯಿತು. ಕ್ರಿ.ಶ. 1799 ರ ನಾಲ್ಕನೇ ಮೈಸೂರಿನ ಶ್ರೀರಂಗಪಟ್ಟಣ ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಬ್ರಿಟಿಷರ ವಿರುದ್ಧ ಹೋರಾಡುತ್ತಾ

ಮರಣ ಹೊಂದಿದಾಗ, ಚಿತ್ರದುರ್ಗದಲ್ಲಿದ್ದ ಟಿಪ್ಪುವಿನ ಸೈನಿಕರು, ಕೋಟೆಯ ರಕ್ಷಣೆಗೆ ಯಾವುದೇ ಪ್ರಬಲ ನಾಯಕತ್ವ ಇಲ್ಲದಿದ್ದರಿಂದ ಮತ್ತು ಬ್ರಿಟಿಷರ ಸೈನಿಕ ಶಕ್ತಿ ಅಪಾರವಾಗಿದ್ದರಿಂದ, ಚಿತ್ರದುರ್ಗದ ಉಸ್ತುವಾರಿಗಳು ಕೋಟೆಯನ್ನು ಬ್ರಿಟಿಷ್ ಅಧಿಕಾರಿಗಳಿಗೆ ಒಪ್ಪಿಸಿದ್ದರು.[8]

ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಚಿತ್ರದುರ್ಗವನ್ನು ಕೇವಲ ಒಂದು ಪ್ರಾದೇಶಿಕ ಕೋಟೆಯಿಂದ ದಕ್ಷಿಣ ಭಾರತದ ಬಲಿಷ್ಠ ಮಿಲಿಟರಿ ಕೇಂದ್ರವನ್ನಾಗಿ ಪರಿವರ್ತಿಸಿದ್ದರು. ಇದೇ ಸೈನಿಕ ಸೌಲಭ್ಯಗಳು ಮತ್ತು ವ್ಯೂಹಾತ್ಮಕ ವ್ಯವಸ್ಥೆಯು ಮುಂದೆ ಬ್ರಿಟಿಷರು ಇದನ್ನು ತಮ್ಮ ಪ್ರಮುಖ ನೆಲೆಯನ್ನಾಗಿ ಮಾಡಿಕೊಳ್ಳಲು ಪ್ರೇರಣೆಯಾಯಿತು. ಶ್ರೀರಂಗಪಟ್ಟಣವನ್ನು ಗೆದ್ದ ನಂತರ ಬ್ರಿಟಿಷರು ಮೈಸೂರು ಸಾಮ್ರಾಜ್ಯದ ಇತರ ಬಲಿಷ್ಠ ಕೋಟೆಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ತಕ್ಷಣವೇ ಸೈನಿಕ ತುಕಡಿಗಳನ್ನು ರವಾನಿಸಿದ್ದರು. ಚಿತ್ರದುರ್ಗ ಕೋಟೆಯು ದಕ್ಷಿಣ ಭಾರತದಲ್ಲೇ ಅತ್ಯಂತ ಅಭೇದ್ಯವಾದ ಮತ್ತು ಬೃಹತ್ ಮದ್ದುಗುಂಡುಗಳ ಸಂಗ್ರಹವನ್ನು ಹೊಂದಿದ್ದ ಕೋಟೆಯಾಗಿದ್ದರಿಂದ ಬ್ರಿಟಿಷರು ಇದರ ಕಡೆಗೆ ವಿಶೇಷ ಗಮನ ಹರಿಸಿದರು. ಬ್ರಿಟಿಷ್ ಅಧಿಕಾರಿಗಳಾದ ಕರ್ನಲ್ ಜೇಮ್ಸ್ ಡಾಲ್ರಿಂಪಲ್ (Colonel James Dalrymple) ಮತ್ತು ಕರ್ನಲ್ ವೆಲ್ಲೆಸ್ಲಿ (ಮುಂದೆ ಡ್ಯೂಕ್ ಆಫ್ ವೆಲ್ಲಿಂಗ್ಟನ್ ಆದ ಆರ್ಥರ್ ವೆಲ್ಲೆಸ್ಲಿ) ಅವರ ಮಾರ್ಗದರ್ಶನದಲ್ಲಿ ಬ್ರಿಟಿಷ್ ಸೈನ್ಯವು ಚಿತ್ರದುರ್ಗಕ್ಕೆ ಬಂದಿಳಿದಿತ್ತು. ಚಿತ್ರದುರ್ಗ ಕೋಟೆಯು ಅತ್ಯಂತ ಬಲಿಷ್ಠವಾಗಿದ್ದರೂ, ಅಲ್ಲಿ ಯಾವುದೇ ರಕ್ತಪಾತ ಅಥವಾ ಯುದ್ಧ ನಡೆಯದೆ ಬ್ರಿಟಿಷರ ವಶವಾಗಿತ್ತು. ಕಾರಣ, ಟಿಪ್ಪುವಿನ ಮರಣದ ನಂತರ ಚಿತ್ರದುರ್ಗದ ಕೋಟೆಯಲ್ಲಿದ್ದ ಸುಲ್ತಾನನ ಸೈನ್ಯಕ್ಕೆ ಮಾರ್ಗದರ್ಶನ ನೀಡಲು ಯಾವುದೇ ಪ್ರಬಲ ನಾಯಕ ಇರಲಿಲ್ಲ. ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆಯಿಂದಾಗಿ ಚಿತ್ರದುರ್ಗದ ಮೂಲ ನಿವಾಸಿಗಳಾದ ಬೇಡ ನಾಯಕರು ಮತ್ತು ಪಾಳೇಗಾರರ ನಿಷ್ಠಾವಂತರು ಸುಲ್ತಾನನ ಆಡಳಿತದ ಬಗ್ಗೆ ಅಸಮಾಧಾನ ಹೊಂದಿದ್ದರು. ಬ್ರಿಟಿಷರ ಬರುವಿಕೆಯು ತಮಗೆ ಹಳೆಯ ಪಾಳೇಗಾರರ ವೈಭವವನ್ನು ತರಬಹುದು ಅಥವಾ ಸೈನ್ಯದಲ್ಲಿ ಮರಳಿ ಸ್ಥಾನ ಸಿಗಬಹುದು ಎಂಬ ಆಸೆ ಅವರಲ್ಲಿತ್ತು. ಇದರ ಪರಿಣಾಮವಾಗಿ, ಚಿತ್ರದುರ್ಗ ಕೋಟೆಯ ಉಸ್ತುವಾರಿಯಾಗಿದ್ದ ಮುಸ್ಲಿಂ ಅಧಿಕಾರಿಗಳು ಮತ್ತು ಗ್ಯಾರಿಸನ್ ಕಮಾಂಡರ್‌ಗಳು ಹೆಚ್ಚಿನ ಪ್ರತಿರೋಧ ತೋರದೆ ಕೋಟೆಯನ್ನು ಬ್ರಿಟಿಷ್ ಸೈನ್ಯಕ್ಕೆ ಒಪ್ಪಿಸಿದ್ದರು.[9]

ಜೂನ್ 1799 ರ ಹೊತ್ತಿಗೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಚಿತ್ರದುರ್ಗ ಕೋಟೆಯ ಮೇಲೆ ಸಂಪೂರ್ಣ ಆಧಿಪತ್ಯ ಸಾಧಿಸಿತು. ವಶಪಡಿಸಿಕೊಂಡ ತಕ್ಷಣ ಅವರು ಮಾಡಿದ ಮೊದಲ ಕೆಲಸಗಳೆಂದರೆ, ಟಿಪ್ಪು ಸುಲ್ತಾನ್ ಕೋಟೆಯೊಳಗೆ ಸಂಗ್ರಹಿಸಿಟ್ಟಿದ್ದ ಬೃಹತ್ ಪ್ರಮಾಣದ ಗನ್ ಪೌಡರ್, ಫಿರಂಗಿಗಳು ಮತ್ತು ಯುದ್ಧ ಸಾಮಗ್ರಿಗಳನ್ನು ಬ್ರಿಟಿಷರು ವಶಪಡಿಸಿಕೊಂಡರು. ಕೋಟೆಯ ಆಯಕಟ್ಟಿನ ಜಾಗಗಳಲ್ಲಿ ಮತ್ತು ಹೆಬ್ಬಾಗಿಲುಗಳಲ್ಲಿ ಬ್ರಿಟಿಷ್ ಸೈನಿಕರನ್ನು ಕಾವಲಿಗಾಗಿ ನಿಯೋಜಿಸಲಾಯಿತು. ಚಿತ್ರದುರ್ಗವು ಬ್ರಿಟಿಷರ ಅಧಿಕೃತ ಸೈನಿಕ ನೆಲೆಯಾಗಿ (Garrison Town) ಬದಲಾಯಿತು. ಬ್ರಿಟಿಷ್ ಇಂಜಿನಿಯರ್‌ಗಳು ಕೋಟೆಯ ಪ್ರತಿಯೊಂದು ರಹಸ್ಯ ಮಾರ್ಗ, ಬಾವಿ ಮತ್ತು ಬುರುಜುಗಳನ್ನು ನಕ್ಷೆಯ ರೂಪದಲ್ಲಿ ದಾಖಲಿಸಿಕೊಂಡರು. ಚಿತ್ರದುರ್ಗವನ್ನು ವಶಪಡಿಸಿಕೊಂಡ ನಂತರ, ಜುಲೈ 1799 ರಲ್ಲಿ ನಡೆದ 'ಮೈಸೂರು ವಿಭಜನಾ ಒಪ್ಪಂದ'ದ (Treaty of Mysore) ಪ್ರಕಾರ, ಚಿತ್ರದುರ್ಗ ಪ್ರಾಂತ್ಯವನ್ನು ಮರಳಿ ಹಿಂದೂ ರಾಜವಂಶವಾದ ಯದುವಂಶದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ಒಪ್ಪಿಸಲಾಯಿತು. ಆದರೆ, ಇದು ಕೇವಲ

ನಾಮಮಾತ್ರದ ಹಸ್ತಾಂತರವಾಗಿತ್ತು. 'ಸಹಾಯಕ ಸೈನ್ಯ ಪದ್ಧತಿ'ಯ ಪ್ರಕಾರ ಚಿತ್ರದುರ್ಗದ ಕೋಟೆಯ ಸಂಪೂರ್ಣ ಮಿಲಿಟರಿ ಜವಾಬ್ದಾರಿ ಮತ್ತು ನಿಯಂತ್ರಣ ಬ್ರಿಟಿಷರಲ್ಲೇ ಉಳಿದಿತ್ತು.[10]

ಕ್ರಿ.ಶ. 1799ರಲ್ಲಿ ಚಿತ್ರದುರ್ಗವು ಯಾವುದೇ ದೊಡ್ಡ ಯುದ್ಧವಿಲ್ಲದೆ ಬ್ರಿಟಿಷರ ವಶವಾಯಿತು. ಇದು ಟಿಪ್ಪುವಿನ ಪತನದ ನೇರ ಪರಿಣಾಮವಾಗಿತ್ತು ಮತ್ತು ಈ ಘಟನೆಯು ಚಿತ್ರದುರ್ಗದಲ್ಲಿ ಮುಂದಿನ 150 ವರ್ಷಗಳ ಬ್ರಿಟಿಷ್ ಆಧಿಪತ್ಯಕ್ಕೆ ಹಾಗೂ ಆಧುನಿಕ ಆಡಳಿತಕ್ಕೆ ಬಲವಾದ ಮುನ್ನುಡಿ ಬರೆಯಿತು. ಸಹಾಯಕ ಸೈನ್ಯ ಪದ್ಧತಿಯ ಪ್ರಮುಖ ನಿಯಮವೆಂದರೆ, ಸಂಸ್ಥಾನದ ರಕ್ಷಣೆಗಾಗಿ ಬ್ರಿಟಿಷ್ ಸೈನ್ಯವನ್ನು ನಿಯೋಜಿಸುವುದು ಮತ್ತು ಅದರ ಸಂಪೂರ್ಣ ಖರ್ಚನ್ನು ಸ್ಥಳೀಯ ರಾಜರೇ ಭರಿಸುವುದು. ಈ ನಿಯಮದಂತೆ, ಚಿತ್ರದುರ್ಗದ ಭವ್ಯ ಹಾಗೂ ಆಯಕಟ್ಟಿನ ಕೋಟೆಯನ್ನು ಬ್ರಿಟಿಷ್ ಸೈನ್ಯದ ಪ್ರಮುಖ ನೆಲೆಗಳಲ್ಲೊಂದನ್ನಾಗಿ (Garrison) ಘೋಷಿಸಲಾಗಿತ್ತು. ಚಿತ್ರದುರ್ಗದಲ್ಲಿ ಒಡೆಯರ ಆಡಳಿತವಿದ್ದರೂ, ಚಿತ್ರದುರ್ಗ ಕೋಟೆಯ ಒಳಗೆ ಬ್ರಿಟಿಷ್ ಸೈನಿಕರ ಅನುಮತಿಯಿಲ್ಲದೆ ರಾಜನ ಸೈನ್ಯಕ್ಕೂ ಪ್ರವೇಶವಿರಲಿಲ್ಲ. ಮೈಸೂರು ಅರಸರಾಗಿ ಅಧಿಕಾರಕ್ಕೆ ಬಂದಿದ್ದ, ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ ಪರವಾಗಿ ಪ್ರಸಿದ್ಧ ರಾಜತಾಂತ್ರಿಕ ಪೂರ್ಣಯ್ಯ ಮೈಸೂರಿನ ದಿವಾನರಾಗಿ (ಪ್ರಧಾನ ಮಂತ್ರಿ) ಅಧಿಕಾರ ವಹಿಸಿಕೊಂಡರು. ಬ್ರಿಟಿಷ್ ರೆಸಿಡೆಂಟರ ಮಾರ್ಗದರ್ಶನದಲ್ಲಿ ದಿವಾನ ಪೂರ್ಣಯ್ಯ ಚಿತ್ರದುರ್ಗ ಪ್ರಾಂತ್ಯದಲ್ಲಿ ಹಲವು ಮಹತ್ವದ ಆಡಳಿತಾತ್ಮಕ ಬದಲಾವಣೆಗಳನ್ನು ತಂದಿದ್ದರು. ಅವುಗಳಲ್ಲಿ ಮುಖ್ಯವಾಗಿ, ಹೈದರಾಲಿ, ಟಿಪ್ಪು ಮತ್ತು ಬ್ರಿಟಿಷರ ಸರಣಿ ಯುದ್ಧಗಳಿಂದ ಜರ್ಜರಿತವಾಗಿದ್ದ ಚಿತ್ರದುರ್ಗದ ಜನರಲ್ಲಿ ದಿವಾನರ ಆಡಳಿತ ಜಾರಿಗೆ ತಂದಿದ್ದ ಆಡಳಿತದ ಶಿಸ್ತು ಹೊಸ ಭರವಸೆ ಮೂಡಿಸಿತ್ತು. ಕೋಟೆಯನ್ನು ಕಳೆದುಕೊಂಡು ಸುತ್ತಮುತ್ತಲ ಗ್ರಾಮಗಳಲ್ಲಿ ಅಡಗಿದ್ದ ಹಳೆಯ ಪಾಳೇಗಾರರ ನಿಷ್ಠಾವಂತ ಬೇಡ ನಾಯಕರು ಮತ್ತು ದಂಗೆಕೋರರನ್ನು ಪೂರ್ಣಯ್ಯನವರು ಅತ್ಯಂತ ಕಟ್ಟುನಿಟ್ಟಾಗಿ ಹತ್ತಿಕ್ಕಿದರು. ಬ್ರಿಟಿಷ್ ಸೈನ್ಯದ ನೆರಡಿನಿಂದಾಗಿ ಚಿತ್ರದುರ್ಗದಲ್ಲಿ ಯಾವುದೇ ದೊಡ್ಡ ದಂಗೆಗಳು ತಲೆಯೆತ್ತದಂತೆ ನೋಡಿಕೊಳ್ಳಲಾಯಿತು.

ನಾಲ್ಕು ಆಂಗ್ಲೋ ಮೈಸೂರು ಯುದ್ಧಗಳು ಮುಗಿದು ಸಂಸ್ಥಾನಕ್ಕಿದ್ದ ಗ್ರಹಣ ಸರಿಯುವಂತಹ ಕಾಲ ಕೂಡಿ ಬಂದಿದ್ದರೂ, ಯುದ್ಧೋತ್ತರದ ಲಾರ್ಡ್ ವೆಲ್ಲೇಸ್ಲಿ ಮತ್ತು ಜನರಲ್ ಹ್ಯಾರೀಸ್ ನೇತೃತ್ವದ ಬ್ರಿಟೀಷ್ ಆಡಳಿತ ಸಂಸ್ಥಾನವನ್ನು ಚಿತ್ರದುರ್ಗದರಸರಿಗೆ ಮರಳಿ ನೀಡುವಂತೆ ಆದೇಶಿಸಿದ್ದರೂ, ಕ್ರಿ.ಶ. 1782 ರಿಂದ 1811ರ ವರೆಗೆ ಹೈದರ್, ಟಿಪ್ಪು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರವರ ದಿವಾನನಾಗಿ ಕಾರ್ಯನಿರ್ವಹಿಸಿದ್ದ ಪೂರ್ಣಯ್ಯ, ಚಿತ್ರದುರ್ಗದರಸರಿಗೆ ಅಧಿಕಾರ ಬಿಟ್ಟುಕೊಡಲು ಮನಸ್ಸು ಮಾಡಿರಲಿಲ್ಲ. ಈ ವೇಳೆಗಾಗಲೆ ಹೇಗೋ ಹೈದರ್ ಮತ್ತು ಟಿಪ್ಪುಸುಲ್ತಾನ್ ಮೈಸೂರಿನ ನೆರೆಯ ಬಹುತೇಕ ಪಾಳೆಯಗಾರರನ್ನು ಸೋಲಿಸಿ ಅವರ ಪಾಳೆಯಪಟ್ಟುಗಳನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಯಾಗಿದೆ, ಒಂದು ವೇಳೆ ಚಿತ್ರದುರ್ಗ ಪಾಳೆಯಗಾರರಿಗೆ ಸಂಸ್ಥಾನವನ್ನು ಹಿಂದಿರುಗಿಸಿದರೆ, ಮೈಸೂರು ಸಂಸ್ಥಾನ ತನ್ನ ರಾಜ್ಯವ್ಯಾಪ್ತಿಯನ್ನು ಕಳೆದು ಕೊಳ್ಳಬೇಕಾಗುತ್ತದೆ ಎಂದು ದಿವಾನ್ ಪೂರ್ಣಯ್ಯ ನಿರ್ಧರಿಸಿದ್ದು, ಚಿತ್ರದುರ್ಗದರಸರಿಗೆ ಸಂಸ್ಥಾನವನ್ನು ಬಿಟ್ಟುಕೊಡದಿರಲು ಪ್ರಮುಖ ಕಾರಣವಾಗಿತ್ತು.[11] ಚಿತ್ರದುರ್ಗದ ಸುತ್ತಮುತ್ತಲಿನ ಕೃಷಿ ಭೂಮಿಯನ್ನು ಪುನರುಜ್ಜೀವನಗೊಳಿಸಲಾಯಿತು. ಬ್ರಿಟಿಷರಿಗೆ ನೀಡಬೇಕಿದ್ದ ವಾರ್ಷಿಕ ಕಪ್ಪಕಾಣಿಕೆಯನ್ನು ಸರಿದೂಗಿಸಲು ವ್ಯವಸ್ಥಿತ ತೆರಿಗೆ ಸಂಗ್ರಹಣಾ ಪದ್ಧತಿಯನ್ನು ಜಾರಿಗೆ ತರಲಾಗಿತ್ತು. ಬ್ರಿಟಿಷರು ರಕ್ತಪಾತವಿಲ್ಲದೆ ಚಿತ್ರದುರ್ಗವನ್ನು ದೀರ್ಘಕಾಲ ನಿಯಂತ್ರಿಸಲು ಅವರು ಜಾರಿಗೊಳಿಸಿದ್ದ ಸಹಾಯಕ

ಸೈನ್ಯ ಪದ್ಧತಿ ಅತ್ಯಂತ ಪ್ರಬಲ ರಾಜತಾಂತ್ರಿಕ ಅಸ್ತ್ರವಾಗಿತ್ತು.

ಕ್ರಿ.ಶ. 1831 ರಿಂದ 1881 ರವರೆಗಿನ ಬ್ರಿಟಿಷ್ ಕಮಿಷನರ್‌ಗಳ ನೇರ ಆಳ್ವಿಕೆ ಚಿತ್ರದುರ್ಗದ ಇತಿಹಾಸದಲ್ಲೇ ಅತ್ಯಂತ ಪ್ರಮುಖ ಕಾಲಘಟ್ಟವಾಗಿದೆ. ಈ 50 ವರ್ಷಗಳಲ್ಲಿ ಚಿತ್ರದುರ್ಗವು ಕೇವಲ ಒಂದು ಮಿಲಿಟರಿ ಕೋಟೆಯಾಗಿ ಉಳಿಯದೆ, ಆಧುನಿಕ ಆಡಳಿತಾತ್ಮಕ ವ್ಯವಸ್ಥೆಯನ್ನು ಹೊಂದಿದ ಸುಸಜ್ಜಿತ ಜಿಲ್ಲೆಯಾಗಿ ಮಾರ್ಪಟ್ಟಿತು. ಮೈಸೂರು ಸಂಸ್ಥಾನದಲ್ಲಿ ಉಂಟಾದ ಆಡಳಿತಾತ್ಮಕ ಬಿಕ್ಕಟ್ಟು ಮತ್ತು ನಗರ ದಂಗೆಯನ್ನು ನೆಪವಾಗಿಟ್ಟುಕೊಂಡು ಬ್ರಿಟಿಷ್ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್ ಒಡೆಯರ ಅಧಿಕಾರವನ್ನು ತಾತ್ಕಾಲಿಕವಾಗಿ ಹಿಂಪಡೆದು ಕಮಿಷನರ್‌ಗಳ ಆಳ್ವಿಕೆಯನ್ನು ಜಾರಿಗೆ ತಂದರು. ಈ ಅವಧಿಯಲ್ಲಿ ಇಡೀ ಮೈಸೂರು ಪ್ರಾಂತ್ಯವನ್ನು ಮುನ್ನಡೆಸಿದ ಪ್ರಮುಖ ಕಮಿಷನರ್‌ಗಳೆಂದರೆ, ಸರ್ ಮಾರ್ಕ್ ಕಬ್ಬನ್ (Sir Mark Cubbon) ಮತ್ತು ಲೂವಿನ್ ಬೆಂಥಮ್ ಬೌರಿಂಗ್ (Lewin Bentham Bowring). ಬೌರಿಂಗ್ ಅವರ ಕಾಲದಲ್ಲಿ ಆಡಳಿತದ ಸುಧಾರಣೆಗಾಗಿ ಇಡೀ ರಾಜ್ಯವನ್ನು 3 ವಿಭಾಗಗಳಾಗಿ (Divisions) ಮತ್ತು 8 ಜಿಲ್ಲೆಗಳಾಗಿ ವಿಂಗಡಿಸಲಾಗಿತ್ತು. ಈ ಹೊಸ ವ್ಯವಸ್ಥೆಯಲ್ಲಿ ಚಿತ್ರದುರ್ಗವನ್ನು ನಂದಿದುರ್ಗ ವಿಭಾಗಕ್ಕೆ (Nandidroog Division) ಒಳಪಟ್ಟ ಒಂದು ಪ್ರಮುಖ ಜಿಲ್ಲೆಯನ್ನಾಗಿ ಮಾಡಲಾಗಿತ್ತು. ಜಿಲ್ಲೆಯ ಉಸ್ತುವಾರಿಯನ್ನು ಬ್ರಿಟಿಷ್ ಡೆಪ್ಯುಟಿ ಕಮಿಷನರ್‌ಗೆ ವಹಿಸಲಾಯಿತು.[12]

ಚಿತ್ರದುರ್ಗದ ಸುತ್ತಮುತ್ತಲ ಪ್ರದೇಶಗಳಲ್ಲಿ ಸಣ್ಣಪುಟ್ಟ ಜಮೀನ್ದಾರರು, ದೇಶಮುಖರು ಮತ್ತು ಹಳೆಯ ಪಾಳೇಗಾರರ ನಿಷ್ಠಾವಂತರು ಸ್ಥಳೀಯವಾಗಿ ಇಟ್ಟುಕೊಂಡಿದ್ದ ಪ್ರಭಾವವನ್ನು ಕಮಿಷನರ್‌ಗಳು ಸಂಪೂರ್ಣವಾಗಿ ಹತ್ತಿಕ್ಕಿದರು. ಕಂದಾಯ ಸಂಗ್ರಹಣೆ ಮತ್ತು ಕಾನೂನು ಸುವ್ಯವಸ್ಥೆಯನ್ನು ಸಂಪೂರ್ಣವಾಗಿ ಸರ್ಕಾರದ ಅಧೀನಕ್ಕೆ ತೆಗೆದುಕೊಳ್ಳಲಾಯಿತು. ಹಳೆಯ ಪಾಳೇಗಾರರ ವಂಶಸ್ಥರಿಗೆ ಬ್ರಿಟಿಷ್ ಸರ್ಕಾರವು ಮಾಸಿಕ ಭತ್ಯೆ ನೀಡಿ, ಅವರನ್ನು ರಾಜಕೀಯ ಚಟುವಟಿಕೆಗಳಿಂದ ದೂರವಿಟ್ಟಿತು.[13]

ಕಮಿಷನರ್‌ಗಳ ಆಳ್ವಿಕೆಯಲ್ಲಿ ಚಿತ್ರದುರ್ಗದಲ್ಲಿ ಸಾಂಪ್ರದಾಯಿಕ ಪದ್ಧತಿಗಳ ಜಾಗದಲ್ಲಿ ಬ್ರಿಟಿಷ್ ಮಾದರಿಯ ಕಾನೂನುಗಳು ಜಾರಿಗೆ ಬಂದವು. ಚಿತ್ರದುರ್ಗ ನಗರದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಇತ್ಯರ್ಥಪಡಿಸಲು ಮುನ್ಸಿಫ್ ಮತ್ತು ಜಿಲ್ಲಾ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿತ್ತು. ಭೂಮಿಯನ್ನು ವೈಜ್ಞಾನಿಕವಾಗಿ ಅಳೆದು, ಕಂದಾಯವನ್ನು ನಿಗದಿಪಡಿಸುವ 'ಇನಾಮ್ ಕಮಿಷನ್' ಮತ್ತು ಭೂ ಸಮೀಕ್ಷೆ ಪ್ರಕ್ರಿಯೆಗಳು ಜಿಲ್ಲೆಯಲ್ಲಿ ಚುರುಕುಗೊಂಡಿದ್ದವು. ಚಿತ್ರದುರ್ಗವನ್ನು ಬೆಂಗಳೂರು, ಬಳ್ಳಾರಿ ಮತ್ತು ಶಿವಮೊಗ್ಗದಂತಹ ಪ್ರಮುಖ ನಗರಗಳೊಂದಿಗೆ ಸಂಪರ್ಕಿಸುವ ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣವಾಯಿತು. ಬ್ರಿಟಿಷ್ ಅಧಿಕಾರಿಗಳ ಕಚೇರಿಗಳು, ಸೆಂಟ್ರಲ್ ಜೈಲು, ಬ್ರಿಟಿಷ್ ಶೈಲಿಯ ಪ್ರವಾಸಿ ಬಂಗಲೆಗಳು, ಆಸ್ಪತ್ರೆಗಳು ಮೊದಲಾದ ಸಾರ್ವಜನಿಕ ಕಟ್ಟಡಗಳು ನಿರ್ಮಾಣಗೊಂಡವು. ಜಿಲ್ಲೆಯಲ್ಲಿ ಪಾಶ್ಚಾತ್ಯ ಶಿಕ್ಷಣವನ್ನು ನೀಡುವ ಮೊದಲ ಸರ್ಕಾರಿ ಆಂಗ್ಲೋ–ವರ್ನಾಕ್ಯುಲರ್ (Anglo-Vernacular) ಶಾಲೆಗಳು ಇವರ ಕಾಲದಲ್ಲೇ ಆರಂಭವಾದವು.

ಈ ಅವಧಿಯಲ್ಲಾದ ಮತ್ತೊಂದು ದೊಡ್ಡ ಬದಲಾವಣೆಯೆಂದರೆ, ಕೋಟೆಯೊಳಗಿದ್ದ ಬ್ರಿಟಿಷ್ ಸೈನ್ಯವನ್ನು ಹಂತಹಂತವಾಗಿ ಹರಿಹರ ಮತ್ತು ಬೆಂಗಳೂರಿನ ಕಂಟೋನ್ಮೆಂಟ್‌ಗಳಿಗೆ ಸ್ಥಳಾಂತರಿಸಲಾಯಿತು. ಇದಕ್ಕೆ ಚಿತ್ರದುರ್ಗದಲ್ಲಿದ್ದ ಮಲೇರಿಯಾ ಜ್ವರದ ಹರಡುವಿಕೆ ಮತ್ತು ನೀರಿನ ಅಭಾವವೇ ಮುಖ್ಯ ಕಾರಣವಾಗಿತ್ತು. ಸೈನ್ಯವು ಹೋದ ನಂತರ, ಕೋಟೆಯು ಕೇವಲ ಒಂದು ಐತಿಹಾಸಿಕ ಸ್ಮಾರಕವಾಗಿ ಉಳಿಯಿತು ಮತ್ತು

ಕೋಟೆಯ ಕೆಳಗಿದ್ದ ಬಯಲು ನಗರವು ಆಡಳಿತದ ಪ್ರಮುಖ ಕೇಂದ್ರವಾಗಿ ಬೆಳೆಯಿತು.[14] ಒಟ್ಟಾರೆಯಾಗಿ, ಕ್ರಿ.ಶ. 1831–1881ರ 50 ವರ್ಷಗಳ ಬ್ರಿಟಿಷ್ ಕಮಿಷನರ್‌ಗಳ ನೇರ ಆಳ್ವಿಕೆಯು ಚಿತ್ರದುರ್ಗಕ್ಕೆ ರಾಜಕೀಯ ಸ್ಥಿರತೆಯನ್ನು ತಂದಿತ್ತು. ಹಳೆಯ ಸಾಮಂತಶಾಹಿ ಮತ್ತು ಮಿಲಿಟರಿ ವ್ಯವಸ್ಥೆಯ ಬದಲಿಗೆ, ಆಧುನಿಕ ಜಿಲ್ಲಾ ಆಡಳಿತಕ್ಕೆ ಬಲವಾದ ಬುನಾದಿಯನ್ನು ಹಾಕಿತ್ತು.

### ಬ್ರಿಟಿಷ್ ವಿರೋಧಿ ಹೋರಾಟಗಳು

ಬ್ರಿಟಿಷ್ ಆಳ್ವಿಕೆಯ ವಿರುದ್ಧ ಚಿತ್ರದುರ್ಗ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆದ ಬ್ರಿಟಿಷ್ ವಿರೋಧಿ ಹೋರಾಟಗಳು ಅತ್ಯಂತ ಉಗ್ರವಾಗಿದ್ದವು. ಚಿತ್ರದುರ್ಗದ ಪಾಳೇಗಾರರ ಸೈನಿಕ ಹಿನ್ನೆಲೆ ಹಾಗೂ ಸ್ವಾಭಿಮಾನಿ ಜನಸಮುದಾಯವು ಬ್ರಿಟಿಷರ ಸಾರ್ವಭೌಮತ್ವ ಮತ್ತು ಅವರ ಕಠಿಣ ಆರ್ಥಿಕ ನೀತಿಗಳನ್ನು ಸುಲಭವಾಗಿ ಒಪ್ಪಿಕೊಳ್ಳಲಿಲ್ಲ. ಹದಿನೆಂಟನೇ ಶತಮಾನದ ಅಂತ್ಯದಿಂದ ಹಿಡಿದು ಭಾರತದ ಸ್ವಾತಂತ್ರ್ಯದವರೆಗೆ ಚಿತ್ರದುರ್ಗ ಪ್ರಾಂತ್ಯದಲ್ಲಿ ನಡೆದ ಪ್ರಮುಖ ಬ್ರಿಟಿಷ್ ವಿರೋಧಿ ಹೋರಾಟಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.

### ಧೋಂಡಿಯಾ ವಾಘ್‌ನ ದಂಗೆ (1800)

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ ಚಿತ್ರದುರ್ಗ ಮತ್ತು ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ನಡೆದ ಹೋರಾಟಗಳಲ್ಲಿ ಧೋಂಡಿಯಾ ವಾಘ್‌ನ ದಂಗೆ (1800) ಅತ್ಯಂತ ಸಾಹಸಮಯ ಮತ್ತು ಮೊದಲ ಸಶಸ್ತ್ರ ದಂಗೆಯಾಗಿದೆ. 1799ರಲ್ಲಿ ಟಿಪ್ಪು ಸುಲ್ತಾನನ ಪತನದ ನಂತರ ಸೃಷ್ಟಿಯಾದ ರಾಜಕೀಯ ಶೂನ್ಯತೆಯನ್ನು ಬಳಸಿಕೊಂಡು ಬ್ರಿಟಿಷರ ನಿದ್ದೆಗೆಡಿಸಿದ ಕೀರ್ತಿ ಧೋಂಡಿಯಾ ವಾಘ್‌ನಿಗೆ ಸಲ್ಲುತ್ತದೆ. ಕ್ರಿ.ಶ. 1799ರ ಮೇ 4ರಂದು ಬ್ರಿಟಿಷರು ಕೋಟೆಯನ್ನು ವಶಪಡಿಸಿಕೊಂಡಾಗ ಇವನನ್ನು ಆಕಸ್ಮಿಕವಾಗಿ ಬಿಡುಗಡೆ ಮಾಡಲಾಗಿತ್ತು. ಜೈಲಿನಿಂದ ಹೊರಬಂದ ತಕ್ಷಣ ಧೋಂಡಿಯಾ ಬ್ರಿಟಿಷರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳದೆ, ಅವರ ವಿರುದ್ಧ ಗೆರಿಲ್ಲಾ ಮಾದರಿಯ ಯುದ್ಧ ಘೋಷಿಸಿದ್ದನು. ಧೋಂಡಿಯಾ ವಾಘ್‌ನ ಬೆಳವಣಿಗೆಯು ಬ್ರಿಟಿಷರಿಗೆ ದಕ್ಷಿಣ ಭಾರತದಲ್ಲಿ ದೊಡ್ಡ ಕಂಟಕವಾಗಿ ಪರಿಣಮಿಸಿತು. ಇದನ್ನು ಗಂಭೀರವಾಗಿ ಪರಿಗಣಿಸಿದ ಗವರ್ನರ್ ಜನರಲ್ ಲಾರ್ಡ್ ವೆಲ್ಲೆಸ್ಲಿ, ಈ ದಂಗೆಯನ್ನು ಹತ್ತಿಕ್ಕುವ ಜವಾಬ್ದಾರಿಯನ್ನು ತನ್ನ ಸಹೋದರ ಹಾಗೂ ಅಪ್ರತಿಮ ಸೈನಿಕ ಕಮಾಂಡರ್ ಆದ ಆರ್ಥರ್ ವೆಲ್ಲೆಸ್ಲಿಗೆ ಒಪ್ಪಿಸಿದನು. ಆರ್ಥರ್ ವೆಲ್ಲೆಸ್ಲಿ ಬೃಹತ್ ಬ್ರಿಟಿಷ್ ಸೈನ್ಯದೊಂದಿಗೆ ಚಿತ್ರದುರ್ಗ, ಹರಿಹರ ಮತ್ತು ಉತ್ತರ ಕರ್ನಾಟಕದ ಭಾಗಗಳಲ್ಲಿ ಧೋಂಡಿಯಾನನ್ನು ಬೆನ್ನಟ್ಟಿದ್ದನು. ಅಂತಿಮವಾಗಿ ಸೆಪ್ಟೆಂಬರ್ 10, 1800 ರಂದು ರಾಯಚೂರು ಜಿಲ್ಲೆಯ ಕೋನಗಲ್ ಎಂಬಲ್ಲಿ ಆರ್ಥರ್ ವೆಲ್ಲೆಸ್ಲಿಯ ಬ್ರಿಟಿಷ್ ಅಶ್ವಾರೋಹಿ ಸೈನ್ಯವು ಧೋಂಡಿಯಾ ವಾಘ್‌ನ ಸೈನ್ಯವನ್ನು ಸುತ್ತುವರಿಯಿತು. ನಡೆದ ಉಗ್ರ ಜಗಳದಲ್ಲಿ ಧೋಂಡಿಯಾ ವಾಘ್ ರಣರಂಗದಲ್ಲೇ ವೀರಮರಣ ಹೊಂದಿದನು.[15]

### ಸಣ್ಣಪುಟ್ಟ ಪಾಳೇಗಾರರು ಮತ್ತು ಜಮೀನ್ದಾರರ ಪ್ರತಿರೋಧಗಳು

ಬ್ರಿಟಿಷರು ಮತ್ತು ದಿವಾನ ಪೂರ್ಣಯ್ಯನವರ ಜಂಟಿ ಆಡಳಿತವು ಚಿತ್ರದುರ್ಗದ ಹಳೆಯ ಸಾಮಂತರು ಹಾಗೂ ಪಾಳೇಗಾರರ ಹಕ್ಕುಗಳನ್ನು ಕಸಿದುಕೊಂಡಾಗ ಆಂತರಿಕವಾಗಿ ಹಲವು ಸಣ್ಣ ದಂಗೆಗಳು ನಡೆದಿದ್ದವು. ಅವುಗಳೆಂದರೆ,

ಬಿಳಿಸೋದೆ ಮತ್ತು ತರೀಕೆರೆ ನಾಯಕರ ದಂಗೆಗಳು ಚಿತ್ರದುರ್ಗದ ಗಡಿಭಾಗಕ್ಕೆ ಹೊಂದಿಕೊಂಡಿದ್ದ ತರೀಕೆರೆ ಮತ್ತು ಬಿಳಿಸೋದೆಯ ನಾಯಕರು ಬ್ರಿಟಿಷರಿಗೆ ಕಪ್ಪಕಾಣಿಕೆ ನೀಡಲು ನಿರಾಕರಿಸಿ ಸಶಸ್ತ್ರದಂಗೆ ಎದ್ದರು. ಚಿತ್ರದುರ್ಗದ ಕಾಡುಗಳನ್ನು ಇವರು ಬ್ರಿಟಿಷ್ ಸೈನ್ಯದ ವಿರುದ್ಧ

ಅಡಗಿಕೊಳ್ಳಲು ಮತ್ತು ಗೆರಿಲ್ಲಾ ಯುದ್ಧ ನಡೆಸಲು ಬಳಸಿಕೊಂಡರು.

ಹರಪನಹಳ್ಳಿ ಮತ್ತು ಜಗಳೂರು ಭಾಗದ ರೈತ ಪ್ರತಿಭಟನೆಗಳು (ಕ್ರಿ.ಶ. 1830–31) ಪ್ರಮುಖವಾಗಿವೆ. ಕ್ರಿ.ಶ. 1830–31ರಲ್ಲಿ ಮೈಸೂರು ಸಂಸ್ಥಾನದ ಇತಿಹಾಸದಲ್ಲೇ ಅತಿ ದೊಡ್ಡ ರೈತ ದಂಗೆಯಾದ 'ನಗರ ದಂಗೆ' ಆರಂಭವಾಗಿತ್ತು. ಇದರ ತೀವ್ರತೆ ಚಿತ್ರದುರ್ಗ ಜಿಲ್ಲೆಯ ಮೇಲೂ ದಟ್ಟವಾಗಿ ಹರಡಿತು. ಬ್ರಿಟಿಷ್ ಬೆಂಬಲಿತ ಆಡಳಿತವು ವಿಧಿಸಿದ ಅತಿಯಾದ ಭೂಕಂದಾಯ ಮತ್ತು ತೆರಿಗೆ ವಸೂಲಿಗಾರರ ದಬ್ಬಾಳಿಕೆಯ ವಿರುದ್ಧ ಚಿತ್ರದುರ್ಗದ ಜಗಳೂರು, ದಾವಣಗೆರೆ ಮತ್ತು ಹರಪನಹಳ್ಳಿ (ಅಂದಿನ ಚಿತ್ರದುರ್ಗ ಜಿಲ್ಲೆಯ ಭಾಗಗಳು) ಪ್ರಾಂತ್ಯದ ರೈತರು ಹಾಗೂ ಸ್ಥಳೀಯ ಮುಖಂಡರು ಶಸ್ತ್ರ ಹಿಡಿದು ಹೋರಾಡಿದ್ದರು. ಈ ದಂಗೆಯು ಎಷ್ಟು ತೀವ್ರವಾಗಿತ್ತೆಂದರೆ, ಇದನ್ನು ಹತ್ತಿಕ್ಕಲು ಬ್ರಿಟಿಷ್ ರೆಸಿಡೆಂಟರು ಸೈನ್ಯವನ್ನು ಬಳಸಬೇಕಾಯಿತು ಮತ್ತು ಇದೇ ಕಾರಣ ನೀಡಿ ಬ್ರಿಟಿಷರು ಒಡೆಯರ ಆಳ್ವಿಕೆಯನ್ನು ಕಿತ್ತುಕೊಂಡು ಕಮಿಷನರ್‌ಗಳ ನೇರ ಆಳ್ವಿಕೆ ಜಾರಿಗೆ ತಂದಿದ್ದರು.[16]

**ಆಡಳಿತ, ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ**

ಕ್ರಿ.ಶ. 1831ರ ನಗರ ದಂಗೆಯ ನಂತರ ಚಿತ್ರದುರ್ಗದ ಇತಿಹಾಸದಲ್ಲಿ ಜಾರಿಗೆ ಬಂದಿದ್ದ ಆಡಳಿತಾತ್ಮಕ ಬದಲಾವಣೆಗಳು ಅತ್ಯಂತ ಕ್ರಾಂತಿಕಾರಕವಾಗಿದ್ದವು. ಅಲ್ಲಿಯವರೆಗೆ ಕೇವಲ ರಕ್ಷಣಾತ್ಮಕ ಕೋಟೆಯಾಗಿ ಮತ್ತು ಸಾಂಪ್ರದಾಯಿಕ ಕಂದಾಯ ಕೇಂದ್ರವಾಗಿದ್ದ ಚಿತ್ರದುರ್ಗವನ್ನು ಬ್ರಿಟಿಷರು ಅತ್ಯಂತ ವ್ಯವಸ್ಥಿತವಾದ, ಆಧುನಿಕ ಅಧಿಕಾರಶಾಹಿ ಜಿಲ್ಲೆಯನ್ನಾಗಿ ಪರಿವರ್ತಿಸಿದ್ದರು. ಬ್ರಿಟಿಷ್ ಕಮಿಷನರ್‌ಗಳ ಕಾಲದಲ್ಲಿ (ಕ್ರಿ.ಶ. 1831 – 1881) ಚಿತ್ರದುರ್ಗದಲ್ಲಿ ಜಾರಿಗೆ ಬಂದ ಪ್ರಮುಖ ಆಡಳಿತಾತ್ಮಕ ಬೆಳವಣಿಗೆಗಳೆಂದರೆ, ಬ್ರಿಟಿಷ್ ಕಮಿಷನರ್ ಲೂವಿನ್ ಬೆಂಥಮ್ ಬೌರಿಂಗ್ ಚಿತ್ರದುರ್ಗವನ್ನು ಕಂದಾಯ ಮತ್ತು ಆಡಳಿತದ ಸುಲಭ ನಿರ್ವಹಣೆಗಾಗಿ ಒಂದು ಸ್ವತಂತ್ರ ಜಿಲ್ಲೆಯನ್ನಾಗಿ ರೂಪಿಸಿದ್ದನು. ಇಡೀ ಜಿಲ್ಲೆಯ ಆಡಳಿತವನ್ನು ಒಬ್ಬರೇ ಅಧಿಕಾರಿ ಡೆಪ್ಯುಟಿ ಕಮಿಷನರ್‌ಗೆ ನೀಡಿದ್ದನು. ಆಡಳಿತ ನಡೆಸಲು ಜಿಲ್ಲಾ ಕಚೇರಿ ಸಂಕೀರ್ಣವನ್ನು ನಿರ್ಮಿಸಲಾಗಿತ್ತು. ಇವನ ಕೆಳಗೆ, ತಾಲೂಕುಗಳನ್ನು ಮರುಸಂಘಟಿಸಿ, ಪ್ರತಿ ತಾಲೂಕಿಗೆ ಅಮಲ್ದಾರ್‌ನನ್ನು ಆಡಳಿತ ಮುಖ್ಯಸ್ಥನನ್ನಾಗಿ ನೇಮಿಸಿದ್ದನು.

ಬ್ರಿಟಿಷರ ಆಡಳಿತದ ಮುಖ್ಯ ಉದ್ದೇಶ ವ್ಯವಸ್ಥಿತವಾಗಿ ತೆರಿಗೆ ಸಂಗ್ರಹಿಸುವುದಾಗಿತ್ತು. ಇದಕ್ಕಾಗಿ ಅವರು ಹಳೇ ಪದ್ಧತಿಗಳನ್ನು ಕೈಬಿಟ್ಟು ಹೊಸ ರೈತವಾರಿ ಪದ್ಧತಿ ಎಂದರೆ, ರೈತರು ನೇರವಾಗಿ ಸರ್ಕಾರಕ್ಕೆ ತೆರಿಗೆ ಪಾವತಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿದ್ದನು. 'ಇನಾಮ್ ಕಮಿಷನ್' ಮೂಲಕ ಜಿಲ್ಲೆಯ ಪ್ರತಿಯೊಂದು ಕೃಷಿ ಭೂಮಿಯನ್ನು ವೈಜ್ಞಾನಿಕವಾಗಿ ಅಳೆದು, ದಾಖಲೆಗಳನ್ನು ಕಚೇರಿಯಲ್ಲಿ ಸಂರಕ್ಷಿಸುವ ವ್ಯವಸ್ಥೆ ಆರಂಭವಾಗಿತ್ತು. ಸಾಂಪ್ರದಾಯಿಕ ಪಾಳೆಯಗಾರರ ಕಾಲದ ಕಾವಲು ವ್ಯವಸ್ಥೆ ಮತ್ತು ಪಂಚಾಯತಿ ನ್ಯಾಯದಾನವನ್ನು ಬದಲಾಯಿಸಿ ಕಾನೂನುಬದ್ಧ ಪೊಲೀಸ್ ಮತ್ತು ನ್ಯಾಯಾಲಯ ವ್ಯವಸ್ಥೆಯನ್ನು ಸ್ಥಾಪಿಸಲಾಗಿತ್ತು. ಬ್ರಿಟಿಷ್ ಕಾನೂನು ಸಂಹಿತೆಯ ಆಧಾರದ ಮೇಲೆ ಮುನ್ಸಿಫ್ ಮತ್ತು ಜಿಲ್ಲಾ ನ್ಯಾಯಾಲಯಗಳನ್ನು ಆರಂಭಿಸಲಾಗಿತ್ತು. ಚಿತ್ರದುರ್ಗ ನಗರದ ಸ್ವಚ್ಛತೆ, ರಸ್ತೆ ದೀಪಗಳು ಮತ್ತು ಕುಡಿಯುವ ನೀರಿನ ನಿರ್ವಹಣೆಗಾಗಿ ಮುನ್ಸಿಪಾಲಿಟಿ (ನಗರಸಭೆ) ಪರಿಕಲ್ಪನೆಯನ್ನು ಪರಿಚಯಿಸಲಾಗಿತ್ತು. ನಾಗರಿಕರಿಗೆ ಆಧುನಿಕ ವೈದ್ಯಕೀಯ ಸೌಲಭ್ಯ ನೀಡಲು ಜಿಲ್ಲಾ ಆಸ್ಪತ್ರೆ ಮತ್ತು ಪಾಶ್ಚಾತ್ಯ ಶಿಕ್ಷಣ ನೀಡಲು ಸರ್ಕಾರಿ ಶಾಲೆಗಳನ್ನು ಆಡಳಿತದ ಭಾಗವಾಗಿಯೇ ಆರಂಭಿಸಲಾಗಿತ್ತು. ಬ್ರಿಟಿಷರು ಜಾರಿಗೊಳಿಸಿದ್ದ ಈ ಎಲ್ಲಾ ಆಡಳಿತಾತ್ಮಕ ಬದಲಾವಣೆಗಳು, ಚಿತ್ರದುರ್ಗವನ್ನು ಮಧ್ಯಕಾಲೀನ ಸಾಮಂತಶಾಹಿ ಪದ್ಧತಿಯಿಂದ ಮುಕ್ತಗೊಳಿಸಿ, ಇಂದಿನ ಆಧುನಿಕ

ಪ್ರಜಾಪ್ರಭುತ್ವ ಆಡಳಿತಕ್ಕೆ ಬೇಕಾದ ತಳಹದಿಯನ್ನು (ಜಿಲ್ಲಾಧಿಕಾರಿ, ಪೊಲೀಸ್, ನ್ಯಾಯಾಲಯಗಳು, ಮುನ್ಸಿಪಾಲಿಟಿ) ಸಿದ್ಧಪಡಿಸಿಕೊಟ್ಟಿತ್ತು.

ಬ್ರಿಟಿಷ್ ಆಡಳಿತಾವಧಿಯಲ್ಲಿ ಮತ್ತು ಮೈಸೂರು ಸಂಸ್ಥಾನದ ಸಹಯೋಗದೊಂದಿಗೆ ಜಾರಿಗೆ ಬಂದ ಪ್ರಗತಿಪರ ಕಾನೂನುಗಳು ಚಿತ್ರದುರ್ಗದ ಸಮಾಜದ ಮೇಲೂ ಪ್ರಭಾವ ಬೀರಿದ್ದವು. 'ರೆಗ್ಯುಲೇಶನ್ ಆಫ್ 1894' ರ ಪ್ರಕಾರ, ಬಾಲ್ಯವಿವಾಹ ಮತ್ತು ಜಿಲ್ಲೆಯ ಕೆಲವು ದೇವಸ್ಥಾನಗಳಲ್ಲಿ ಆಚರಣೆಯಲ್ಲಿದ್ದ ದೇವದಾಸಿ ಪದ್ಧತಿಯನ್ನು ಕಾನೂನುಬದ್ಧವಾಗಿ ನಿಷೇಧಗೊಳಿಸಲಾಗಿತ್ತು. ಚಿತ್ರದುರ್ಗವು ಐತಿಹಾಸಿಕವಾಗಿ ಬೇಡ (ನಾಯಕ), ಹರಿಜನ ಮತ್ತು ಇತರ ಶ್ರಮಿಕ ವರ್ಗಗಳನ್ನು ದೊಡ್ಡ ಪ್ರಮಾಣದಲ್ಲಿ ಹೊಂದಿರುವ ಪ್ರಾಂತ್ಯವಾಗಿದೆ. ಬ್ರಿಟಿಷರ ಆಡಳಿತಾತ್ಮಕ ಮತ್ತು ಶೈಕ್ಷಣಿಕ ನೀತಿಗಳು ಈ ಸಮುದಾಯಗಳಲ್ಲಿ ಹೊಸ ಜಾಗೃತಿ ಮೂಡಿಸಿದ್ದವು. ಕ್ರಿ.ಶ. 1919ರ ಮಿಲರ್ ಸಮಿತಿ ವರದಿಯಿಂದ ಚಿತ್ರದುರ್ಗದ ವಿದ್ಯಾವಂತ ಯುವಕರಿಗೆ, ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಕಲ್ಪಿಸಲು ಸಾಧ್ಯವಾಗಿತ್ತು. ಬ್ರಿಟಿಷರು ತಂದ ಆಡಳಿತ ಬದಲಾವಣೆ ಹಾಗೂ ರೈಲ್ವೆ ಸಂಪರ್ಕದಿಂದಾಗಿ ಚಿತ್ರದುರ್ಗ ಮತ್ತು ದಾವಣಗೆರೆ ನಗರಗಳು ವೇಗವಾಗಿ ಬೆಳೆದಿದ್ದವು. ಪಾಶ್ಚಾತ್ಯ ಶಿಕ್ಷಣ ಮತ್ತು ಪತ್ರಿಕೆಗಳ ಪ್ರಭಾವದಿಂದಾಗಿ ಚಿತ್ರದುರ್ಗದ ಜನರಲ್ಲಿ ಮೂಢನಂಬಿಕೆಗಳ ವಿರುದ್ಧ ವೈಚಾರಿಕ ಮನೋಭಾವ ಬೆಳೆಯಲು ಕಾರಣವಾಗಿತ್ತು. ರಾಜಪ್ರಭುತ್ವ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಆಲೋಚನೆಗಳಿಂದ ಹೊರಬಂದು, 'ಪ್ರಜಾಪ್ರತಿನಿಧಿ ಸಭೆ'ಯ ಮೂಲಕ ತಮ್ಮ ಹಕ್ಕುಗಳನ್ನು ಕೇಳುವ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಯಸುವ ಸಾಮಾಜಿಕ ಪ್ರಜ್ಞೆ ಜನಸಾಮಾನ್ಯರಲ್ಲಿ ಮೂಡಲು ಕಾರಣವಾಗಿತ್ತು.[17] ಒಟ್ಟಾರೆಯಾಗಿ, ಚಿತ್ರದುರ್ಗದಲ್ಲಿ ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ಜಾರಿಯಾದ ಸಾಮಾಜಿಕ ಕಾನೂನುಗಳು ಶತಮಾನಗಳ ಕಾಲ ಬೇರೂರಿದ್ದ ಅನಿಷ್ಟ ಪದ್ಧತಿಗಳಿಗೆ ಕಾನೂನಾತ್ಮಕ ತಡೆ ಒಡ್ಡಿದವು. ಈ ಸುಧಾರಣೆಗಳು ಜಿಲ್ಲೆಯ ಜನರಲ್ಲಿ ಸಾಮಾಜಿಕ ಸಮಾನತೆಯ ಬಗ್ಗೆ ಹೊಸ ಆಲೋಚನೆಗಳಿಗೆ ಕಾರಣವಾಗಿದ್ದವು.

**ಕೊನೆ ಟಿಪ್ಪಣಿಗಳು**


1. ರೇವಣಸಿದ್ದಪ್ಪ, ಎಸ್. (2025). ಬ್ರಿಟಿಷ್ ದಳಪತಿ ಕರ್ನಲ್ ಜೇಮ್ಸ್ ಡಾಲ್ರಿಂಪಾಲ್ (ಕ್ರಿ.ಶ. 1757 ರಿಂದ 1800). *ಅಭಿಜಾತ ಕನ್ನಡ.* 11(6), ಪು. 61.
2. ರೇವಣಸಿದ್ದಪ್ಪ, ಎಸ್. (2025). ಮೈಸೂರು ಪ್ರಭುತ್ವದೊಂದಿಗೆ ಚಿತ್ರದುರ್ಗ ಪಾಳೆಯಗಾರರ ಹೋರಾಟ (ಕ್ರಿ.ಶ. 1750 ರಿಂದ 1849ರ ವರೆಗೆ). *ಅಭಿಜಾತ ಕನ್ನಡ.* 11(5). ಪು. 203.
3. ರೇವಣಸಿದ್ದಪ್ಪ, ಎಸ್. (2025). *ಪೂರ್ವೋಕ್ತ–1* ಪು. 61.
4. Volume-15, Issue-03, April 2026. Special Issue. Aksharasurya: Peer-Reviewed, Multi Lingual E-Journal. P. 54.
5. Volume-15, Issue-03, April 2026. Special Issue. Aksharasurya: Peer-Reviewed, Multi Lingual E-Journal. P. 56-57.
6. Barry Lewis, Chitradurga in the Early 1800s: Archaeological Interpretations of Colonial Drawings, Indian Council of Historical Research, Bangalore. P. 10.
7. Sri Sathyan, B. N. (1967). *Mysore State Gazetteer: Chitradurga District.* Government of Karnataka, Bangalore. P. 7.

8. Karnataka State Gazetteer: Chitradurga District, Volumes 13, 1965, P. 32.
9. ರೇವಣಸಿದ್ದಪ್ಪ, ಎಸ್. (2025). *ಪೂರ್ವೋಕ್ತ–1.* ಪು. 65–67.
10. ಅದೇ. ಪು. 64–65.
11. ರೇವಣಸಿದ್ದಪ್ಪ, ಎಸ್. (2025). *ಪೂರ್ವೋಕ್ತ–2*, ಪು. 210–211.
12. ಷೇಕ್ ಅಲಿ, ಬಿ. (2018). *ಕರ್ನಾಟಕ ಚರಿತ್ರೆ (ಕ್ರಿ.ಶ. 1800–1900).* ಸಂಪುಟ –6, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪು. 25–26.
13. ಅದೇ. ಪು. 43–44.
14. Volume-15, Issue-03, April 2026. Special Issue. Aksharasurya: Peer-Reviewed, Multi Lingual E-Journal. P. 60.
15. ರೇವಣಸಿದ್ದಪ್ಪ, ಎಸ್. (2025). *ಪೂರ್ವೋಕ್ತ–1*, ಪು. 65–66.
16. ರೇವಣಸಿದ್ದಪ್ಪ, ಎಸ್. (2025). *ಪೂರ್ವೋಕ್ತ–2*, ಪು. 211–212.
17. Volume-15, Issue-03, April 2026. Special Issue. Aksharasurya: Peer-Reviewed, Multi Lingual E-Journal. P. 53-55.